# ನವಿಲುಗನ್ನಡಿ

ಮುಖಪುಟದ ಗಣಪ ಇಡೀ ಸಂಚಿಕೆಗೆ ವಿಶೇಷ ಮೆರುಗು ನೀಡಿದ್ದಾನೆ. ಒಳಹೂರಣವೂ ಅಷ್ಟೇ ಸ್ವಾದಿಷ್ಟವಾಗಿದೆ.

**ಅಮೃತೇಶ ತಂಡರ, ಅಣ್ಣಿಗೇರಿ**

ಟಿ. ತಿಮ್ಮಪ್ಪ ಅವರ ಕತೆ 'ಹಸಿವು' ಮನಮುಟ್ಟುವಂತಿತ್ತು. ನೈತಿಕತೆ ಮತ್ತು ಪ್ರಾಮಾಣಿಕತೆಯ ನಡುವಿನ ಸೂಕ್ಷ್ಮಪರದೆ ಸರಿಸುವಲ್ಲಿ ಈ ಕತೆ ಯಶಸ್ವಿಯಾಗಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

ಟಿ.ತಿಮ್ಮಪ್ಪ ಅವರ ಕತೆ 'ಹಸಿವು' ತುಂಬಾ ಖುಷಿ ಕೊಟ್ಟಿತು.

**ಪಿ. ಜಯವಂತ ಪೈ, ಕುಂದಾಪುರ**

ಈ ಕಾಲದ ಕಥಾಹಂದರವನ್ನು ಹೊಂದಿದ 'ನಾಗರಾಜ ವಸ್ತಾರೆ ಅವರ 'ಪದ ಕುಸಿದರೆ ನೆಲವಿದೆಯೇ?' ಕತೆ ಗಮನಸೆಳೆಯಿತು.

**ಚಿದಾನಂದ ಎಂ., ಧಾರವಾಡ**

ಜೆ.ವಿ. ಕಾರ್ಲೊ ಅನುವಾದಿಸಿದ ರೋಆಲ್ಡ್ ಡಾಲ್ ಅವರ ಕತೆ 'ಬೆರಳು ಕಲಾವಿದ' ಕುತೂಹಲಕಾರಿ. ಲಾಮಾ ತ್ಸಂಗ್‌ಯಾಂಗ್‌ನ 'ಪ್ರೇಮಕಾವ್ಯ'ವನ್ನು ಕೆ.ಎಸ್. ರವಿಕುಮಾರ್ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

**ಮೋಹನಕುಮಾರ್, ಗಜೇಂದ್ರಗಡ**

ಆಗಸ್ಟ್, 2017ರ ಸಂಚಿಕೆಯಲ್ಲಿ ಪ್ರಕಟವಾದ ಗೋಪೀನಾಥ ರಾವ್ ಅವರ 'ಸಿಂಹಾಸನ' ಕತೆ ಅರಬ್ ಅಲೆಮಾರಿ ಸಂಸ್ಕೃತಿಯೊಂದು ಪಾಶ್ಚಾತ್ಯ ಯಂತ್ರ ನಾಗರಿಕತೆಯ ಚಕ್ರದಡಿ ಸಿಕ್ಕು ಹೇಗೆ ಅವಸಾನ ಹೊಂದಿತು ಎಂಬುದನ್ನು ಸಿಂಹಾಸನದ ರೂಪಕದಲ್ಲಿ ಹಿಡಿದಿಟ್ಟಿದೆ.

ಪುಟ್ಟ ಕತೆಯಲ್ಲಿ ದೊಡ್ಡ ಸಂಸ್ಕೃತಿ ಸದ್ದಿಲ್ಲದಡಗಿದೆ. ಕಿರಿದಾದುದರಲ್ಲಿ ಹಿರಿದಾದ ಅರ್ಥವನ್ನಿಟ್ಟ ಲೇಖಕರ ಕುಶಲತೆಯನ್ನು ಮೆಚ್ಚಲೇಬೇಕು.

**ಪ್ರೊ. ಶಿವರಾಮಯ್ಯ, ಬೆಂಗಳೂರು**




ಶೈಲಜಾ ಸುರೇಶ್ ಅವರ 'ತೀರ್ಪು' ಕತೆ ಸರಳ ನಿರೂಪಣೆ, ಗಟ್ಟಿ ಒಳಾರ್ಥದಿಂದ ಕೂಡಿದೆ.

**ಕೆ.ಆರ್. ಮೀನಾಕ್ಷಿ, ಬೈಲಹೊಂಗಲ**

ಶ್ರೀಧರ ಬಳಗಾರ ಅವರ 'ಮಾಲತಿ ಮಾತಾಡಿದಳು' ಕತೆಯಲ್ಲಿ ಮಲೆನಾಡಿನ ಒಂಟಿಮನೆಯ ಮಹಿಳೆಯೊಬ್ಬಳ ಹೋರಾಟದ ಬದುಕು ದಟ್ಟವಾಗಿ ಮೂಡಿ ಬಂದಿದೆ.

**ರಾಮಚಂದ್ರ ಭಟ್ಟ, ಸಿರಸಿ**

ಕುಂ.ವೀ ಅವರ 'ನನ್ನ ಕಥಾಪ್ರಸಂಗ' ಓದಿ ಖುಷಿಯಾಯಿತು. ಅವರ ಅನುಭವದ ಮಾತುಗಳು ಮುದನೀಡಿದವು.

**ಎಸ್. ರೇಖಾ, ಬಾಳೆಹೊನ್ನೂರು**

ಗೋಪೀನಾಥ ರಾವ್ ಅವರ 'ಸಿಂಹಾಸನ' ಕತೆ ಮನಕಲುಕಿತು.

**ರಾಜೇಗೌಡ ಹೊಸಹಳ್ಳಿ, ಬೆಂಗಳೂರು**

ವಾಸುದೇವ ಮೂರ್ತಿ ಪಿ. ಅವರ 'ಲಾಸ್ಟ್ ಕೇಸ್' ಕೊನೆಯವರೆಗೂ ಆಸಕ್ತಿಯನ್ನು ಕೆರಳಿಸುತ್ತ ಸಾಗುವ ಉತ್ತಮ ಕತೆ.

**ವಿ. ಅನುಪಮಾ, ಮಾಲೂರು**